**ಓ.ಎಸ್. ನಂಃ 28/2011**
**ಪಿ <u>ಡಬ್ಲ್ಯೂಃ 1</u>**

ದಿನಾಂಕಃ 07-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಎನ್ ಆರ್ ಕೆ ವಕೀಲರಿಂದಃ</u>

ನನಗೆ ಮೂರು ಜನ ಸಹೋದರಿಯವರು ಹಾಗೂ ಇಬ್ಬರು ಸಹೋದರರಿದ್ದಾರೆ. ಜುಗುನಾಬಾಯಿ, ರಾದಾಬಾಯಿ ಹಾಗೂ ಉಮಾಬಾಯಿ ನನ್ನ ಸಹೋದರಿಯರು ಮತ್ತು ಮೃತ ಗೋಪಾಲಸಿಂಗ್ ಹಾಗೂ ಪ್ರತಿವಾದಿ ನನ್ನ ಸಹೋದರರಾಗಿರುತ್ತಾರೆ. ನಾನು ಮೂಲ ವಾದ ಪತ್ರದಲ್ಲಿ ವಿಭಾಗವಾಗಿದ್ದು ಅದರಂತೆ ಹಕ್ಕು ಘೋಷಣೆ ಮಾಡುಂತೆ ಪರಿಹಾರ ಕೇಳಿದ್ದೆನು ಎಂದರೆ ಸರಿ. ಮೇಲ್ಮನವಿಯಲ್ಲಿ ನನ್ನ ವಿರುದ್ಧ ತೀರ್ಪು ಆಗಿತ್ತು ಎಂದರೆ ಸರಿ. ಅದಾದ ನಂತರ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ 2 ನೇ ಮೇಲ್ಮನವಿ ಸಲ್ಲಿಸಿದ್ದೆನು ಎಂದರೆ ಸರಿ. ನನ್ನ ಅಕ್ಕ ಉಮಾದೇವಿ ರವರ ನನಗೆ ಆ ನಂತರ ಮರಣ ಶಾಸನಗಳ ಬಗ್ಗೆ ಮಾಹಿತಿ ನೀಡಿದ್ದರು. 2011 ರಿಂದ 2016 ವರೆಗೆ ನೀವು ಉಮಾದೇವಿ ರವರನ್ನು ಬೇಟ್ಟಿ ಆಗಿಲ್ಲವೇ ಎಂದರೆ ಸಾಕ್ಷಿಯು ಬೆಟ್ಟಿ ಆಗಿದ್ದೆನು ಎಂದು ನುಡಿಯುತ್ತಾರೆ. ಈ ದಾವೆ ನಡೆಯುತ್ತಿರುವ ವಿಷಯ ಉಮಾದೇವಿ ರವರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಹಿಂದೆ ನನ್ನ ತಾಯಿ ಹಾಗೂ ಸಹೋದರಿ ತಮ್ಮ ಹತ್ತಿರ ಬಂದಾಗ ಯಾವುದೋ ದಾಖಲಾತಿ ಮಾಡಿದ್ದು ಈ ಬಗ್ಗೆ ಸುದೀರ್ ಸಿಂಗ್ ವಕೀಲರನ್ನು ಕೇಳಿ ಮಾಹಿತಿ ಪಡೆದುಕೊಳ್ಳುವಂತೆ ನನಗೆ ಉಮಾದೇವಿ ರವರು ಹೇಳಿದ್ದರು. ಸದರಿ ವಕೀಲರು ತಾಳಿಕೋಟೆಗೆ ಬಂದಾಗ ನಾನು ಅವರನ್ನು ವಿಚಾರಿಸಿದ್ದು ಅಗ ಸದರಿಯವರು ನನ್ನ ತಾಯಿ ಹಾಗೂ ಸಹೋದರಿ ಜುಗುಣಾಬಾಯಿ ರವರು ಮರಣ ಶಾಸನ ಮಾಡಿದ್ದು ಸದರಿ ದಾಖಲೆಯನ್ನು ಮುದ್ದೆ ಬಿಹಾಳ ನೊಂದಣಾಧಿಕಾರಿಗಳ ಕಚೇರಿಯಿಂದ ಪಡೆದುಕೊಳ್ಳುವಂತೆ ನನಗೆ ತಿಳಿಸಿದ್ದರು. ಮರಣ ಶಾಸನ ಮಾಡಿಸುವಾಗ ವಕೀಲರ ಬಳಿಗೆ ಯಾರು ಯಾರು ಹೋಗಿದ್ದರು ಹಾಗೂ ಏನು ಮಾಹಿತಿ ನೀಡಿದ್ದರು ಎಂದರೆ ಸಾಕ್ಷಿಯು ನನಗೆ ವಕೀಲರು ಮರಣ ಶಾಸನ ಮಾಡಿರುವ ಬಗ್ಗೆ ಮಾತ್ರ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ತಮ್ಮ ಹತ್ತಿರ ಮರಣ ಶಾಸನ ಮಾಡಿಸಲು ಯಾರು ಬಂದಿದ್ದರು ಹಾಗೂ ಯಾವ ಯಾವ ಮಾಹಿತಿ ನೀಡಿದ್ದರು ಎಂಬುದನ್ನು ನಿಮಗೆ ವಕೀಲರು ತಿಳಿಸಿಲ್ಲವೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಂತರ ತಾಳಿಕೋಟೆಯಲ್ಲಿ ಇರುವ ನನ್ನ ಸಂಬಂಧಿಕರನ್ನು

ವಿಚಾರಿಸಲಾಗಿ ನನ್ನ ಸಂಬಂಧಿಕ ತಿಕಾರಾಮ್ ರವರು ನನ್ನ ತಾಯಿ ಹಾಗೂ ಜುಗುಣಾಬಾಯಿ ರವರೊಂದಿಗೆ ಮರಣ ಶಾಸನ ಮಾಡಿಸಲು ತಾವು ಸಹ ವಕೀಲರ ಬಳಿಗೆ ಹೋಗಿದ್ದರು ಎಂಬುದಾಗಿ ನನಗೆ ತಿಳಿಸಿದ್ದರು.

2. ನನ್ನ ತಾಯಿ ಗುರುಮಠಕಲಿನಲ್ಲಿ ಖಾಯಂ ವಾಸವಾಗಿದ್ದರು ಎಂದರೆ ಸರಿ. ನಿಮ್ಮ ತಾಯಿ ತಾಳಿಕೋಟೆಗೆ ಹೋಗುವ ಯಾವುದೇ ಪ್ರಸಂಗ ಇರಲಿಲ್ಲ ಎಂದರೆ ಸಾಕ್ಷಿಯು ಆಗಾಗ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿ 2008 ರಲ್ಲಿ ಮರಣಹೊಂದಿದ್ದಾರೆ. ನಿಮ್ಮ ತಾಯಿ ತೀರಿಕೊಂಡಾಗ ಅವರಿಗೆ 80-85 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು ಸರಿಯಲ್ಲ, 75 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಮರಣಹೊಂದುವ ಸುಮಾರು 15 ವರ್ಷಗಳಿಂದ ಸಕ್ಕರೆ ಕಾಯಿಲೆ, ಅದಿಕ ರಕ್ತದೊತ್ತಡ ಹಾಗೂ ಹೃದಯ ಸಂಬಂಧಿ ಕಾಯಿಲೆ ಇದ್ದವು ಎಂದರೆ ಸರಿಯಲ್ಲ. ನನ್ನ ತಾಯಿ ಕಲಬುರಗಿಯ ಗೋಪಾಲಸಿಂಗ್ ವೈದ್ಯರ ಹತ್ತಿರ ಸತತ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಾಯಿ ತೀರಿಕೊಳ್ಳುವ ಮೊದಲು ಹಾಸಿಗೆ ಹಿಡಿದಿದ್ದರು, ಎಲ್ಲಿಯೂ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಸ್ನಾನದ ಕೋಣೆಯಲ್ಲಿ ಬಿದ್ದಿದ್ದರು ಹಾಗಾಗಿ ಒಂದು ವರ್ಷ ಹಾಸಿಗೆ ಹಿಡಿದಿದ್ದರು ಎಂದು ನುಡಿಯುತ್ತಾರೆ. ಸದರಿ ಒಂದು ವರ್ಷದ ಅವದಿಯಲ್ಲಿ ಅರೆ ಪ್ರಜ್ಞಾವಸ್ಥೆಯಲ್ಲಿ ಇದ್ದರು ಎಂದರೆ ಸಾಕ್ಷಿಯು ಸರಿಯಲ್ಲ, ಅವರಿಗೆ ತಿರುಗಾಡಲು ಮಾತ್ರ ಬರುತ್ತಿರಲಿಲ್ಲ ಹೊರತು ಬೇರೆ ಯಾವುದೇ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ.

3. ಶಿವಾನಿ ಎಂಬುವವರು ನನ್ನ ಅಣ್ಣ ಗೋಪಾಲ ಸಿಂಗ್ ರವರ ಮಗಳಾಗಿರತ್ತಾಳೆ ಎಂದರೆ ಸರಿ. ಸದರಿಯವರನ್ನು ವಿಜಯಪುರಕ್ಕೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸಾಕ್ಷಿಯು ಸರಿ, ಅವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ದಿಃ 28.11.2001 ರಂದು ಸದರಿ ಶಿವಾನಿ ರವರ ಮದುವೆ ಆಗಿರುತ್ತದೆ ಎಂದರೆ ಸರಿ. ಸದರಿ ಮದುವೆಯಲ್ಲಿ ನನ್ನ ಎಲ್ಲ ಸಹೋದರ-ಸಹೋದರಿಯವರು ಭಾಗಿಯಾಗಿದ್ದರು ಎಂದರೆ ಸರಿ. ಪ್ರೇಮ ಪ್ರಸಾದ್ ಎಂಬಾತ ನನ್ನ 2 ನೇ ಅಕ್ಕನ ಗಂಡ ಆಗಿರುತ್ತಾರೆ. ಸದರಿ ಪ್ರೇಮ ಪ್ರಸಾದ್ ಹಾಗೂ ಪ್ರತಿವಾದಿಯ ನಡುವೆ ಹಲವಾರು ವರ್ಷಗಳಿಂದ ವೈಷಮ್ಯ ಇದೆ ಎಂದರೆ ಸರಿಯಲ್ಲ. ಸದರಿ ಪ್ರೇಮ ಪ್ರಸಾದ್, ಭಗತ್ ಸಿಂಗ್ ಹಾಗೂ ನಾವುಗಳು ಸೇರಿಕೊಂಡು ಸುಳ್ಳು ಮರಣ ಶಾಸನಗಳನ್ನು ಸೃಷ್ಟಿ ಮಾಡಿದ್ದೇವೆ

ಎಂದರೆ ಸರಿಯಲ್ಲ. ಮರಣ ಶಾಸನ ಮಾಡಿಕೊಟ್ಟಿದ್ದಾರೆ ಎಂದು ಹೇಳುವ ದಿನದಂದು ನನ್ನ ತಾಯಿ ಗುರುಮಠಕಲಿನಲ್ಲಿಯೇ ಇದ್ದರು, ಮುದ್ದೆ ಬಿಹಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ.

4. ಜುಗುಣಾಬಾಯಿ ರವರು ಯಾವುದೇ ಆಸ್ತಿ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಎರಡು ಮರಣಶಾಸನಗಳಲ್ಲಿ ಒಂದೇ ಸರ್ವೆ ನಂಬರುಗಳನ್ನು ನಮೂದಿಸಲಾಗಿದೆ ಎಂದರೆ ಸರಿ. ಮರಣ ಶಾಸನದ ಇಬ್ಬರೂ ಸಾಕ್ಷಿದಾರರು ಗುರುಮಠಕಲ್ ಪಟ್ಟಣದವರಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರಾದ ಹರಿಸಿಂಗ್ ಹಾಗೂ ಟಿಕಾರಾಮ್ ಸಿಂಗ್ ರವರು ನಿಮ್ಮ ಸಂಬಂಧಿಕರಾಗಿರುವುದಿಲ್ಲ ಎಂದರೆ ಸಾಕ್ಷಿಯು ದೂರದ ಸಂಬಂಧಿಕರಾಗಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 29.11.2001 ರಂದು ನನ್ನ ತಾಯಿ ಅಥವಾ ಸಹೋದರ ಜುಗುಣಾಬಾಯಿ ರವರು ಯಾವುದೇ ಮರಣ ಶಾಸನ ಪತ್ರ ಬರೆಸಿಲ್ಲ ಎಂದರೆ ಸರಿಯಲ್ಲ.

5. ಮರಣ ಶಾಸನದಲ್ಲಿ ನಮೂದಿಸಿದ ಎಲ್ಲಾ ಆಸ್ತಿಗಳು ಗೋಪಾಲಸಿಂಗ್ ರವರು ಖರೀದಿಸಿದ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಆತ ನೊಂದಾಯಿತ ಖರೀದಿ ಪತ್ರಗಳ ಅಡಿಯಲ್ಲಿ ಸದರಿ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸಾಕ್ಷಿಯು ಆತ ತನ್ನ 35 ನೇ ವಯಸ್ಸಿನಲ್ಲಿಯೇ ತೀರಿಕೊಂಡಿದ್ದು, ಎಲ್ಲಾ ಆಸ್ತಿಗಳನ್ನು ನನ್ನ ತಂದೆ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಮರಣ ಶಾಸನದಲ್ಲಿ ನಮೂದಿಸಿದ ಆಸ್ತಿಗಳ ಮೇಲೆ ನನ್ನ ತಾಯಿ ಹಾಗೂ ಜುಗುಣಾಬಾಯಿ ರವರಿಗೆ ಯಾವುದೇ ರೀತಿ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯನ್ನು ಸತಾಯಿಸುವ ಉದ್ದೇಶದಿಂದ ನಾನು ಸುಳ್ಳು ಮರಣ ಶಾಸನಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ

ಓ.ಎಸ್. ನಂಃ **28/2011**

ಪಿ <u>ಡಬ್ಲ್ಯೂಃ **3**</u>

ದಿನಾಂಕಃ 07-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಎನ್ ಆ್‌ರ್ ಕೆ ವಕೀಲರಿಂದಃ</u>

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ತಾಯಿ ಹಾಗೂ ಸಹೋದರಿಯರು ಮತ್ತು ಸಹೋದರರ ನಡುವೆ ವಿಭಾಗವಾಗಿದ್ದು 03 ಹಿಸ್ಸೆಗಳನ್ನು ಮಾಡಿಕೊಂಡಿದ್ದರು ಎಂದು ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ನನ್ನ ಅಣ್ಣನ ಮಗಳ ಮದುವೆ ಸಮಯದಲ್ಲಿ ನನ್ನ ತಾಯಿ ಹಾಗೂ ನನ್ನ ಅಕ್ಕ ಜುಗುಣಾಬಾಯಿ ರವರು ನನ್ನ ಹತ್ತಿರ ಬಂದು ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ನನ್ನ ಇನ್ನೊಬ್ಬ ಸಹೋದರಿ ವಾದಿಯಾದ ಪ್ರಮಿಳಾ ರವರಿಗೆ ಮರಣ ಶಾಸನದ ಮೂಲಕ ಬಿಟ್ಟು ಕೊಡುವುದಾಗಿ ತಿಳಿಸಿದ್ದರು ಎಂದು ಸಹ ಪ್ರಮಾಣ ಪತ್ರದಲ್ಲಿ ಬರೆಸಿದ್ದೆನೆ. ಸದರಿಯವರು ಮದುವೆ ಕಾರ್ಯಕ್ರಮ ಮುಗಿಸಿಕೊಂಡು ತಾಳಿಕೋಟೆಗೆ ಬಂದಾಗ ನನ್ನ ಮುಂದೆ ಸರಿ ವಿಷಯವನ್ನು ತಿಳಿಸಿದ್ದರು. ಮುಂದೆ ಏನಾಗಿದೆ ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಮುದ್ದೆಬಿಹಾಳಿಗೆ ಹೋಗಿದ್ದರು ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಮ್ಮ ತಾಯಿ ಹಾಗೂ ಸಹೋದರಿ ಮರಣ ಶಾಸನ ಮಾಡಿದ್ದೇ ಆದಲ್ಲಿ ನಿಮ್ಮನ್ನು ಸಹ ಜೊತೆಯಲ್ಲಿ ಕರೆದುಕೊಂಡು ಹೋಗಬೇಕಾಗಿತ್ತು ಎಂದರೆ ಸಾಕ್ಷಿಯು ಅವರು ನನ್ನನ್ನು ಕರೆದಿಲ್ಲ ಹಾಗಾಗಿ ನಾನು ಹೋಗಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಹಾಗೂ ಅಕ್ಕ ತಾಳಿಕೋಟೆಗೆ ಬಂದಿದ್ದರು ಮತ್ತು ಮರಣಶಾಸನ ಮಾಡುವುದಾಗಿ ನನಗೆ ತಿಳಿ,ಸಿದ್ದರು ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಭಗತ್ ಸಿಂಗ್ ಎಂಬುವವರು ನನ್ನ ಗಂಡ ಆಗಿರುತ್ತಾರೆ. ಪ್ರೇಮ್ ಪ್ರಸಾದ್ ರವರು ನನ್ನ ಅಕ್ಕನ ಗಂಡನ ಆಗಿರುತ್ತಾರೆ. ನನ್ನ ಗಂಡ ಹಾಗೂ ಸದರಿ ಪೇಮ್ ಪ್ರಸಾದ್ ರವರು ಪ್ರತಿವಾದಿಯೊಂದಿಗೆ ಒಳ್ಳೆಯ ಸಂಬಂದಧ ಹೊಂದಿರುವುದಿಲ್ಲ ೃಂದರೆ ಸರಿಯಲ್ಲ. ಆದ್ದರಿಂದ ಸದರಿಯವರು ನನಗೆ ಸುಳ್ಳು ಸಾಕ್ಷ ನುಡಿಯುವಂತೆ ಹೇಳಿಕೊಟ್ಟಿರುತ್ತಾರೆ

ಎಂದರೆ ಸರಿಯಲ್ಲ. ನನ್ನ ತಾಯಿ ಹಾಗೂ ಅಕ್ಕ ಮುದ್ದೆಬಿಹಾಳಿಗೆ ಹೋಗಿಲ್ಲ ಹಾಗೂ ಮರಣ ಶಾಸನ ಪತ್ರ ಬರೆಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ